

# ಮನೆಯೊಳಗೊಂದು ಹರಟೆ ಕಟ್ಟೆ

ಹಳ್ಳಿಗಳಲ್ಲಿನ ಅರಳೀ ಕಟ್ಟೆಯ ಪರಿಕಲ್ಪನೆಯನ್ನೇ ನಗರದ ಮನೆ, ಕಚೇರಿಗಳಲ್ಲೂ ತರುವ ಹೊಸ ಒಳಾಂಗಣ ವಿನ್ಯಾಸದ ಟ್ರೆಂಡ್ ಶುರುವಾಗಿದೆ. ಹಸುರನ್ನು ಪ್ರೀತಿಸುವವರು, ಅಂದಕ್ಕೂ ಪ್ರಾಶಸ್ತ್ಯ ನೀಡುವವರು ಈ ಆಧುನಿಕ 'ಹರಟೆ ಕಟ್ಟೆ'ಯನ್ನು ಮೆಚ್ಚಿಕೊಳ್ಳುತ್ತಿದ್ದಾರೆ.

■ ಸೀಮಾ ಹೆಗಡೆ

ಪುಟ್ಟ ಗುಡಿ ಮುಂದೊಂದು ದೈತ್ಯಾಕಾರದ ಕೆಂಪು–ಬಿಳಿ ಪಟ್ಟೆ ಬಳಿದ ಅಶ್ವತ್ಥ ವೃಕ್ಷ; ಬೆಳಗಾದರೆ ಹೆಂಗಸರ ಹರಕೆ ಪ್ರದಕ್ಷಿಣೆ; ಸಂಜೆಯಾದರೆ ಗಂಡಸರ ವಾರ್ತಾಲಾಪ; ಆಗೊಮ್ಮೆ ಈಗೊಮ್ಮೆ ನಡೆಯುವ ಪಂಚಾಯ್ತಿ; ಹಳ್ಳಿಯೊಂದರ ಈ ಚಿತ್ರಣದಲ್ಲಿ 'ಅರಳೀ ಕಟ್ಟೆ'ಯೇ ಹೀರೊ! ಅರಳಿ ಮರದ ನೆರಳಲ್ಲಿ ಕಿಚಿಗುಟ್ಟುವ ಹಕ್ಕಿಗಳ ಕಲರವದ ನಡುವೆ ಶುದ್ಧವಾದ ಗಾಳಿ ಸೇವಿಸುತ್ತಾ ಒಂದಿಷ್ಟು ಹೊತ್ತು ಕಳೆವ ಕಲ್ಪನೆಯೇ ಖುಷಿ ಕೊಡುವಂಥದ್ದು.

ಈಗೀಗ ಇಂಥದ್ದೇ ಕಲ್ಪನೆಗೆ ರೆಕ್ಕೆಪುಕ್ಕ ಕೊಡುವ ಒಳಾಂಗಣ ವಿನ್ಯಾಸದ ಹೊಸ ಟ್ರೆಂಡ್ ಶುರುವಾಗಿದೆ. ಅದೇ ಮನೆಯೊಳಗಣ ಜಗಲಿ ಕಟ್ಟೆ.

## ಮನೆಯೊಳಗೊಂದು ಮರ ಬೆಳೆಸಿ

ಇತ್ತೀಚೆಗೆ ಹೋಟೆಲ್, ರೆಸಾರ್ಟ್, ಸ್ಟಾರ್ ಸೆಲೆಬ್ರೆಟಿಗಳ ಐಷಾರಾಮಿ ಬಂಗಲೆಗಳಲ್ಲಿ ಎತ್ತರದ ಛಾವಣಿ ಸಾಮಾನ್ಯ ಅಂಶ. ಈ 'ಹೈ ಸೀಲಿಂಗ್' ಪರಿಕಲ್ಪನೆ ಮನೆಯೊಳಗೆ ವಿಶಾಲ ಜಾಗ ಕಲ್ಪಿಸುವುದಲ್ಲದೇ ಸಾಕಷ್ಟು ಗಾಳಿ ಬೆಳಕಿಗೂ ಅವಕಾಶ ಮಾಡಿಕೊಡುತ್ತದೆ. ಹಾಗಾಗಿ ಇಂತಹ ಕಟ್ಟಡಗಳಲ್ಲಿ ಇತರೆ ಒಳಾಂಗಣ ಸಸ್ಯಗಳೊಂದಿಗೆ ಮರವೂ ಸೇರಿರುವುದನ್ನು ಗಮನಿಸಬಹುದು. ಖಾಲಿ ಗೋಡೆಯ ಕ್ಯಾನ್ವಾಸ್ ಮೇಲೆ ಹಸುರು ಗಿಡ ಮರಗಳ ನೈಸರ್ಗಿಕ ಲೈವ್ ಆರ್ಟ್ ಇಂದು ಎಲ್ಲರ ಇಷ್ಟದ ಕಲೆ.

'ಮನೆಯೊಳಗಣ ಮರ' ಹಸುರು ಪ್ರೀತಿಯಷ್ಟೇ ಅಲ್ಲದೆ ಕ್ಷೇಮ–ಆರೋಗ್ಯವನ್ನು, ಮಾನಸಿಕ ಸಂತುಲತೆಯನ್ನು ವರ್ಧಿಸುತ್ತದೆ. ಹಾಗಾಗಿ ಪಟ್ಟಣದ ವೆಲ್‌ನೆಸ್ ಸೆಂಟರ್, ಮೆಡಿಟೇಶನ್ ಸೆಂಟರ್‌ಗಳಲ್ಲಂತೂ ಒಳಾಂಗಣದ ಮರದ ಕಟ್ಟೆಗಳು ಕಡ್ಡಾಯವೇನೋ ಅನ್ನುವಷ್ಟು ಪ್ರಸಿದ್ಧ.

## ಎಲ್ಲ ಮರಗಳು ಸಲ್ಲ

ಮನೆಯೊಳಗೆ ಮರ ಬೆಳೆಸಬೇಕೆಂದು ಕಾಡಿನ ಮರವೊಂದರ ಸಸಿಯನ್ನು ತಂದು ನೆಡಲು ಸಾಧ್ಯವಿಲ್ಲ. ಕಾಡು ಮರಗಳ ಬದುಕು, ಬೆಳವಣಿಗೆ, ಸಂಪನ್ಮೂಲಗಳ ಬಳಕೆಯ ರೀತಿ ಒಳಾಂಗಣಕ್ಕೆ ಒಪ್ಪುವಂಥದ್ದಲ್ಲ. ಈ ನಿಟ್ಟಿನಲ್ಲಿ ಒಳಾಂಗಣಕ್ಕೆ ಸೂಕ್ತ ಮರಗಳ ಆಯ್ಕೆ ಮೊದಲ ಹಂತದ್ದಾಗಬೇಕು. ನಂತರದ್ದು ಸಮೃದ್ಧ ಬೆಳಕಿರುವ ಸ್ಥಳದ ಆಯ್ಕೆ.

ಅರಳಿಯದೇ ಜಾತಿಯ ಫೈಕಸ್ ಬೆಂಜಮಿನಾ, ಫೈಕಸ್ ಲೈರಾಟಾ, ಉಳಿದಂತೆ ಅಂಬ್ರೆಲ್ಲಾ ಪಾಮ್, ಫ್ಯಾನ್ ಲೀಫ್ ಪಾಮ್, ಕಣಗಿಲು/ಪ್ಲುಮೇರಿಯಾ, ಪಚೀರಾ/ಮನಿ ಟ್ರೀಗಳು ಒಳಾಂಗಣಕ್ಕೆ ಸೂಕ್ತ.

ಕಂಟೇನರ್/ಪಾಟ್‌ಗಳನ್ನು ಬಳಸದೇ ನೆಲದಲ್ಲೇ ಗಿಡ ನೆಟ್ಟರೆ ವಿಶಾಲ ಒಳಾಂಗಣಕ್ಕೆ ಹೊಸ ರೀತಿಯ ಲುಕ್ ನೀಡಲು ಸಾಧ್ಯ. ಈಗೆಲ್ಲಾ ನರ್ಸರಿಗಳಲ್ಲಿ ಮರಗಳನ್ನು ಹೋಲುವ ಬೃಹತ್ ಸಸ್ಯಗಳು ಲಭ್ಯವಿರುತ್ತವೆ. ಅವುಗಳನ್ನೇ ಬುಡ ಸಮೇತ ಪೆಟ್ಟಾಗದಂತೆ ನೆಟ್ಟು ಕೊಡುವ ವ್ಯವಸ್ಥೆಯೂ ಇದೆ. ಮನೆಯೊಳಗೆ ಗುರುತುಪಡಿಸಿದ ಜಾಗದಲ್ಲಿ ನಾಲ್ಕಡಿ ಆಳ ಅಗಲದ ಸಿಮೆಂಟ್ ತೊಟ್ಟಿ ನಿರ್ಮಿಸಿ ಅದರಲ್ಲಿಯೇ ಮರಗಳನ್ನು ನೆಡಬಹುದು. ಮರದ ಬೇರುಗಳು ತೊಟ್ಟಿ ಬಿಟ್ಟು ಬಾರದಂತೆ ಅವುಗಳನ್ನು ನಿರ್ಬಂಧಿಸುವುದು ಅತ್ಯಂತ ಅವಶ್ಯಕ. ನೆಟ್ಟ ಗಿಡಕ್ಕೆ ಹಾಕಿದ ನೀರು ಹೊರ ಹೋಗುವಂತೆ ಡ್ರೈನೇಜ್ ನಿರ್ಮಿಸಿದರೆ ಇನ್ನೂ ಒಳಿತು.

ಗಿಡದ ಸುತ್ತ ಕಟ್ಟೆ, ಲಾನ್ ಗ್ರಾಸ್ ಅಥವಾ ಚಂದದ ಕಲ್ಲಿನ ಮುಚ್ಚಿಗೆ, ಮರದ ಮೇಲೆ ಅಲ್ಲೊಂದು ಇಲ್ಲೊಂದು ಫರ್ನ್, ಹೀಗೆ ಸೃಜನಶೀಲತೆಗೆ ತಕ್ಕಂತೆ ಒಳಾಂಗಣವನ್ನು ಇನ್ನಷ್ಟು ಸುಂದರವಾಗಿಸಬಹುದು. ಸಾಕಷ್ಟು ಜಾಗದ ಲಭ್ಯತೆಯಿದ್ದಲ್ಲಿ ಈ ಐಡಿಯಾ ಅನುಸರಿಸಬಹುದು.

ಪ್ರತಿಕ್ರಿಯಿಸಿ: feedback@sudha.co.in